<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ ಃ **28.05.2025**</u>
<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಶ್ರೀ ಎ.ಬಿ.ಎಂ ವಕೀಲರಿಂದ</u>

1. ನಾನು ಮತ್ತು ಆರೋಪಿ ಸಹಪಾಠಿಗಳು. ಸೆಪ್ಟೆಂಬರ್ 2020 ರಲ್ಲಿ ಆರೋಪಿ ನನ್ನನ್ನು ಸಂಪರ್ಕಿಸಿದ್ದರು. ಆರೋಪಿ ಮನೆಯನ್ನು ಖರೀದಿಸುವ ಸಲುವಾಗಿ ನನ್ನ ಬಳಿ ಹಣ ಕೇಳಿದ್ದರು. ನನ್ನ ಮತ್ತು ಆರೋಪಿಯ ಮಧ್ಯ ಯಾವುದೇ ಕರಾರು ಪತ್ರ ಆಗಿರುವುದಿಲ್ಲ. ಸಾಕ್ಷಿ ಮುಂದುವರೆದು ಆರೋಪಿ ನನಗೆ ಚೆಕ್ ಕೊಟ್ಟಿರುತ್ತಾರೆಂದು ಹೇಳುತ್ತಾರೆ. ಅಕ್ಟೋಬರ್ 2020 ರಲ್ಲಿ ನಾನು ಆರೋಪಿಗೆ ಹಣ ಕೊಟ್ಟಿರುತ್ತೇನೆ. ಅಕ್ಟೋಬರ್ 2020 ರಲ್ಲಿ ರೂ. 2 ಲಕ್ಷ ಮತ್ತು ಏಪ್ರಿಲ್ 2021 ರಲ್ಲಿ ರೂ. 6 ಲಕ್ಷ ಹಣ ಆರೋಪಿಗೆ ಕೊಟ್ಟಿರುತ್ತೇನೆ. ಏಪ್ರಿಲ್ 2021 ರಲ್ಲಿ ಆರೋಪಿ ನನಗೆ ಸ್ವತಃ ತಾನೇ ಚೆಕ್ ಕೊಟ್ಟಿರುತ್ತಾರೆ. ಕಾಟ್ಪಾಡಿಯಲ್ಲಿ ಆರೋಪಿ ನನಗೆ ಚೆಕ್ ಕೊಟ್ಟಿರುತ್ತಾರೆ.

2. ನಿಪಿ-1 ರಲ್ಲಿ ಸಹಿಯಲ್ಲಿರುವ ಇಂಕಿಗೂ ಹಾಗೂ ಇತರ ಬರಹಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1 ರ ದಿನಾಂಕ ಮತ್ತು ಮೊತ್ತದ ಅಂಕಿಗಳ ಬರಹದಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ಚೆಕ್ಕಿನಲ್ಲಿ ದಿನಾಂಕವನ್ನು ನಾನೇ ಬರೆದಿರುತ್ತೇನೆಂದರೆ ಸರಿಯಲ್ಲ. ಆರೋಪಿ ನನಗೆ 2 ವರ್ಷದೊಳಗೆ ಹಣ ಕೊಡುತ್ತೇನೆಂದು ಹೇಳಿದ್ದರು. ಆರೋಪಿ ತೆಗೆದುಕೊಂಡ ಹಣಕ್ಕೆ ಪ್ರತಿ ತಿಂಗಳು ಶೇ. 2 ರಷ್ಟು ಬಡ್ಡಿ ಹಣ ಕೊಡಬೇಕಾಗಿತ್ತು. ಆರೋಪಿ ಆನ್‌ಲೈನ್ ಟ್ರೇಡಿಂಗ್ ವ್ಯಾಪಾರ ಮಾಡುತ್ತಾರೆ ಮತ್ತು ಹಾಲಿನ ವ್ಯಾಪಾರ ಮಾಡುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರ. ನಾನು ಆರೋಪಿಗೆ ಕೊಟ್ಟ ಸಾಲದ ಹಣದ ಬಗ್ಗೆ ನನ್ನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ತೋರಿಸಿರುವುದಿಲ್ಲ. 2020-21 ರ ಸಾಲಿನ ಆದಾಯ ತೆರಿಗೆ ರಿಟರ್ನ್ಸ್ ನ್ನು ಹಾಜರುಪಡಿಸುತ್ತೇನೆ. ನಾನು ಆರೋಪಿಯ ವಿರುದ್ಧ ಪೊಲೀಸ್ ದೂರನ್ನು ನೀಡಿದ್ದೆ. ಪೊಲೀಸರ ಮುಂದೆ ಆರೋಪಿ 3 ತಿಂಗಳಲ್ಲಿ ರೂ. 8 ಲಕ್ಷ ಹಣ ಹಿಂದಿರುಗಿಸುತ್ತೇನೆಂದು ಬರೆದು ಕೊಟ್ಟಿದ್ದರು. ಸದರಿ ದಾಖಲೆಯನ್ನು ನಾನು ಹಾಜರು ಪಡಿಸಿರುತ್ತೇನೆ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಜೆಎಂ ನ್ಯಾಯಾಧೀಶರು,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0C0370162024/truecopy/order-2.pdf

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ ಃ **29.07.2025**</u>
<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಃ ಶ್ರೀ ಎ.ಬಿ.ಎಂ ವಕೀಲರಿಂದ</u>

3. ನಾನು ರೂ. 8 ಲಕ್ಷ ಹಣವನ್ನು ಆನ್‌ಲೈನ್ ಟ್ರೆಡಿಂಗ್ ಹೂಡಿಕೆ ಮಾಡುವ ಸಲುವಾಗಿ ಆರೋಪಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿ ಸದರಿ ಟ್ರೆಡಿಂಗ್ ನಲ್ಲಿನ ಲಾಭಾಂಶ ರೂ. 1,53,000 ಹಣವನ್ನು ನನಗೆ ವರ್ಗಾವಣೆ ಮಾಡಿರುತ್ತಾರೆಂದರೆ ಸಾಕ್ಷಿದಾರರು ಅದು ಬಡ್ಡಿ ಹಣ ಎಂದು ಹೇಳುತ್ತಾರೆ. ಅಲ್ಲದೇ ಆರೋಪಿ ನನಗೆ ನಗದು ಮೂಲಕ ಹಣ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾದ ಬಾದ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಆರೋಪಿ ಪೊಲೀಸರ ಮುಂದೆ ಯಾವುದೇ ರೀತಿ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

34 ನೇ ಎಸಿಜೆಎಂ ನ್ಯಾಯಾಧೀಶರು,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0C0370162024/truecopy/order-2.pdf